**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 794(830) |
| ಸದಸ್ಯರ ಹೆಸರು : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ : | 20/09/2022 |
| ಉತ್ತರಿಸುವವರು : | ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ನಗರಸಭೆಗಳನ್ನು ಹೊಂದಿರುವ ನಗರಗಳು ಯಾವುವು; ಈ ನಗರ ಸಭೆಯನ್ನು ಹೊಂದಿರುವ ನಗರಗಳಲ್ಲಿ ಯಾವ ಯಾವ ನಗರಗಳಲ್ಲಿ ಕೊಳಚೆ ನೀರನ್ನು ಸಂಸ್ಕರಿಸಿ ನದಿಗೆ ಅಥವಾ ಇತರೆ ಉದ್ದೇಶಗಳಿಗೆ ಆ ನೀರನ್ನು ಬಳಸಲಾಗುತ್ತಿದೆ; (ವಿವರ ನೀಡುವುದು). | ರಾಜ್ಯದಲ್ಲಿ ನಗರಸಭೆಗಳನ್ನು ಹೊಂದಿರುವ ನಗರಗಳ ಪಟ್ಟಿಯನ್ನು **ಅನುಬಂಧ-1ರಲ್ಲಿ ಲಗತ್ತಿಸಿದೆ.**<br><br>ನಗರಸಭೆಯನ್ನು ಹೊಂದಿರುವ ನಗರಗಳಲ್ಲಿ ಕೊಳಚೆ ನೀರನ್ನು ಸಂಸ್ಕರಿಸಿ ನದಿಗೆ ಅಥವಾ ಇತರೆ ಉದ್ದೇಶಗಳಿಗೆ ಆ ನೀರನ್ನು ಬಳಸಲಾಗುತ್ತಿರುವ ನಗರಗಳ ವಿವರಗಳನ್ನು **ಅನುಬಂಧ-2ರಲ್ಲಿ ಲಗತ್ತಿಸಿದೆ.**<br><br>**ಕೆ.ಯು.ಐ.ಡಿ.ಎಫ್.ಸಿ.-**<br><br>**<u>ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣಾ ಯೋಜನೆ (ಕೆಎಮ್‌ಆರ್‌ಪಿ)</u>**<br><br>ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣ ಯೋಜನೆ (ಕೆಎಂಆರ್‌ಪಿ)ಯಡಿ ರಾಜ್ಯದ ಆಯ್ದ ಎಂಟು(8) ನಗರಸಭೆಗಳಲ್ಲಿ ಕುಡಿಯುವ ನೀರು ಸರಬರಾಜು ಹಾಗೂ ಮೂರು (3) ನಗರಸಭೆಗಳಲ್ಲಿ ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.<br><br>ಕೆಎಂಆರ್‌ಪಿ ಯೋಜನೆಯಡಿ ಈ ಕೆಳಕಂಡ ನಗರಸಭೆಗಳಲ್ಲಿ ಕೊಳಚೆ ನೀರು ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ;<br>• ಚಿಕ್ಕಬಳ್ಳಾಪುರ ನಗರಸಭೆಯಲ್ಲಿ ಡಬ್ಲೂಎಸ್‌ಪಿ ತಂತ್ರಜ್ಞಾನ ಹೊಂದಿರುವ 10 ಎಂಎಲ್‌ಡಿ ಸಾಮರ್ಥ್ಯದ ಘಟಕ<br>• ದೊಡ್ಡಬಳ್ಳಾಪುರ ನಗರಸಭೆಯಲ್ಲಿ ಡಬ್ಲೂಎಸ್‌ಪಿ ತಂತ್ರಜ್ಞಾನ ಹೊಂದಿರುವ 12 ಎಂಎಲ್‌ಡಿ ಸಾಮರ್ಥ್ಯದ ಘಟಕ<br>• ತಿಪಟೂರು ನಗರಸಭೆಯಲ್ಲಿ ಎಸ್‌ಬಿಆರ್ ತಂತ್ರಜ್ಞಾನ ಹೊಂದಿರುವ 6 ಎಂಎಲ್‌ಡಿ ಸಾಮರ್ಥ್ಯದ ಘಟಕ<br>ಮೇಲ್ಕಾಣಿಸಿದ ನಗರಗಳಲ್ಲಿ ಕೊಳಚೆ ನೀರನ್ನು ಸಂಸ್ಕರಿಸಿ, ಶುದ್ಧೀಕರಿಸಿದ ನೀರನ್ನು ಪಕ್ಕದಲ್ಲಿರುವ ನೈಸರ್ಗಿಕ ನಾಲೆಗೆ ಹರಿಸಲಾಗಿದ್ದು, ಅಲ್ಲಿಂದ ಸ್ಥಳೀಯ ರೈತರು ಆ ನೀರನ್ನು ಕೃಷಿ ಭೂಮಿಗೆ ಬಳಸುತ್ತಾರೆ. |

**ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ)**

ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ) ಬೀದರ್, ರಾಯಚೂರು, ಹಾವೇರಿ, ಹೊಸಪೇಟೆ, ಚಾಮರಾಜನಗರ, ಗೋಕಾಕ, ರಾಣೆಬೆನ್ನೂರು, ರಬಕವಿ–ಬನಹಟ್ಟಿ, ಜಮಖಂಡಿ, ಸಿಂಧನೂರು ಮತ್ತು ಇಳಕಲ್ ನಗರಸಭೆಗಳಲ್ಲಿ ಕೊಳಚೆ ನೀರನ್ನು ಸಂಸ್ಕರಿಸಿದ ನಂತರ ಬರುವ ನೀರನ್ನು ನೈಸರ್ಗಿಕ ಕಾಲುವೆ ಮುಖಾಂತರ ಬಿಡಲಾಗುತ್ತಿದೆ. ಜಲ ತ್ಯಾಜ್ಯ ಸಂಸ್ಕರಣ ಘಟಕದ ಸಾಮರ್ಥ್ಯ ಮತ್ತು ಇತರೆ ವಿವರಗಳನ್ನು ಅನುಬಂಧ–3 ರಲ್ಲಿ ಒದಗಿಸಲಾಗಿದೆ.

**ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆ.ಐ.ಯು.ಡಬ್ಲ್ಯೂ.ಎಂ.ಐ.ಪಿ)**

• ಕೆಯುಐಡಿಎಫ್‌ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಕಾರ್ಯಕ್ರಮದಡಿ (ಕ್ವಿಮಿಪ್ – ಜಲಸಿರಿ) ರಾಜ್ಯದ ಆಯ್ದ ಎಂಟು (8) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರು ಸರಬರಾಜು/ ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

• ಕ್ವಿಮಿಪ್ ಯೋಜನೆಯನ್ನು 2 ಟ್ರಾಂಚ್‌ಗಳಾಗಿ ವಿಂಗಡಿಸಲಾಗಿದ್ದು, ಟ್ರಾಂಚ್–1 ನಾಲ್ಕು (4) ನಗರ ಸ್ಥಳೀಯ ಸಂಸ್ಥೆಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ ನಗರ/ಪಟ್ಟಣಗಳನ್ನು ಒಳಗೊಂಡಿರುತ್ತದೆ.

• ಟ್ರಾಂಚ್–2 ನಾಲ್ಕು (4) ನಗರ ಸ್ಥಳೀಯ ಸಂಸ್ಥೆಗಳಾದ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ನಗರ/ ಪಟ್ಟಣಗಳನ್ನು ಒಳಗೊಂಡಿರುತ್ತದೆ.

• ಕ್ವಿಮಿಪ್ ಯೋಜನೆಯಲ್ಲಿ ಹರಿಹರ ನಗರದಲ್ಲಿ 18 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಮಾಡಿ, ಶುದ್ಧೀಕರಿಸಿದ ನೀರನ್ನು ಪಕ್ಕದಲ್ಲಿರುವ ನೈಸರ್ಗಿಕ ನಾಲೆಗೆ ಹರಿಸಲಾಗಿದ್ದು, ಅಲ್ಲಿಂದ ಸ್ಥಳೀಯ ರೈತರು ಆ ನೀರನ್ನು ಕೃಷಿ ಭೂಮಿಗೆ ಬಳಸುತ್ತಾರೆ.

**ಕ.ನ.ನೀ.ಸ ಮತ್ತು ಒ.ಚ ಮಂಡಳಿ.–**

ರಾಜ್ಯದಲ್ಲಿ ಒಟ್ಟು 61 ನಗರಸಭೆಗಳು ಇರುತ್ತವೆ. ಈ 61 ನಗರಸಭೆಗಳ ಪೈಕಿ ಮಂಡಳಿ ವತಿಯಿಂದ 26 ನಗರಸಭೆಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿ ಸದರಿ ಎಲ್ಲಾ ನಗರಸಭೆಗಳಲ್ಲಿ ಮಲಿನ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಿ ಕೊಳಚೆ ನೀರನ್ನು ಸಂಸ್ಕರಿಸಿ ನದಿಗೆ ಅಥವಾ ಇತರೆ ಉದ್ದೇಶಗಳಿಗೆ ನೀರನ್ನು ಬಳಸಲಾಗುತ್ತಿರುವ ವಿವರವನ್ನು ಅನುಭಂದ–4ರಲ್ಲಿ ಒದಗಿಸಲಾಗಿದೆ.

| | | |
|---|---|---|
| (ಆ) | ಬಳ್ಳಾರಿ ಮಹಾನಗರ ಪಾಲಿಕೆ ಹಾಗೂ ಹೊಸಪೇಟೆ ನಗರದಲ್ಲಿ ನಗರಸಭೆಯು ಕೊಳಚೆ ನೀರನ್ನು ಯಾವ ರೀತಿಯಲ್ಲಿ ಶುದ್ಧಿಕರಿಸಿ ಹಾಗೂ ಎಲ್ಲಿಗೆ ಹರಿಸಲಾಗುತ್ತಿದೆ; (ವಿವರ ನೀಡುವುದು). | **ಬಳ್ಳಾರಿ ಮಹಾನಗರ ಪಾಲಿಕೆ:**<br>ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಮೂರು ತ್ಯಾಜ್ಯ ನೀರು ಸಂಸ್ಕರಣ ಘಟಕಗಳಿವೆ.<br>1) 30 ಎಂ.ಎಲ್.ಡಿ. ಸಾಮರ್ಥ್ಯದ ಎಸ್.ಟಿ.ಪಿ. ಅನಂತಪುರ ರಸ್ತೆ, ಬಳ್ಳಾರಿ.<br>2) 15 ಎಂ.ಎಲ್.ಡಿ. ಸಾಮರ್ಥ್ಯದ ಎಸ್.ಟಿ.ಪಿ. ಕೌಲ್‌ಬಜಾರ್, ಬಳ್ಳಾರಿ.<br>ಈ ಎರಡು ಸಂಸ್ಕರಣ ಘಟಕಗಳು ಎಫ್.ಎ.ಎಲ್. ಮಾದರಿ ಆಗಿದ್ದು, 2004 ರಿಂದ ಕಾರ್ಯ ನಿರ್ವಹಿಸುತ್ತಿವೆ. ಸದರಿ ತ್ಯಾಜ್ಯ ನೀರನ್ನು ಸಂಸ್ಕರಿಸಿ ಹಳ್ಳಕ್ಕೆ ಬಿಡಲಾಗುತ್ತಿದೆ. ಸದರಿ ತ್ಯಾಜ್ಯ ನೀರನ್ನು ಜಾನಕಿ ಉಕ್ಕು ಕಾರ್ಖಾನೆ ಗೆ ರೂ. 4.71ಪೈಸೆ / 1000ಲೀ. ಗೆ ಮಾರಾಟ ಮಾಡುತ್ತಿದ್ದು, ಪ್ರತಿ ತಿಂಗಳು ರೂ. 4.38 ಲಕ್ಷ ಪಾಲಿಕೆಗೆ ಆದಾಯ ಬರುತ್ತಿದೆ.<br>3) ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿಯಲ್ಲಿ 10 ಎಂ.ಎಲ್.ಡಿ. ಸಾಮರ್ಥ್ಯದ ಎಸ್.ಟಿ.ಪಿ. ಯನ್ನು ಎಸ್.ಬಿ.ಆರ್. ಮಾದರಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗ, ಬಳ್ಳಾರಿ ರವರು ನಿರ್ಮಿಸಿದ್ದು, 2021ರಿಂದ ಕಾರ್ಯನಿರ್ವಹಿಸುತ್ತಿದೆ. ಸಂಸ್ಕರಿಸಿದ ತ್ಯಾಜ್ಯ ನೀರು ಹಳ್ಳಕ್ಕೆ ಬಿಡಲಾಗುತ್ತಿದೆ. ಹಲವಾರು ಕಾರ್ಖಾನೆಗಳಿಂದ ಬೇಡಿಕೆ ಬಂದಿರುತ್ತದೆ. ಈ ಕುರಿತು ಕ್ರಮ ಕೈಗೊಂಡು ತ್ಯಾಜ್ಯ ನೀರನ್ನು ಹಂಚಿಕೆ ಮಾಡಲಾಗುವುದು.<br>**ಹೊಸಪೇಟೆ ನಗರಸಭೆ:**<br>ಹೊಸಪೇಟೆ ನಗರಕ್ಕೆ ಎನ್.ಕೆ.ಯು.ಎಸ್.ಐ.ಪಿ. ಯೋಜನೆಯಡಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವತಿಯಿಂದ ಕೊಳಚೆ ನೀರು ಶುದ್ಧೀಕರಣ ಘಟಕವನ್ನು ಎ.ಎಸ್.ಪಿ. (Activated Sludge Process) ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿದೆ. ಹೊಸಪೇಟೆ ನಗರದ ಸಂಸ್ಕರಿಸಿದ ಕೊಳಚೆ ನೀರನ್ನು ಕೃಷಿ ಉಪಯೋಗಕ್ಕಾಗಿ ರೈತರು ಉಚಿತವಾಗಿ ಬಳಸಿಕೊಳ್ಳುತ್ತಿದ್ದಾರೆ.<br>**ಕೆ.ಯು.ಐ.ಡಿ.ಎಫ್.ಸಿ.–**<br>**ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ)**<br>ಎನ್‌ಕೆಯುಎಸ್‌ಐಪಿ ಯೋಜನೆಯಡಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಒಳಚರಂಡಿ ಮತ್ತು ಕೊಳಚೆ ನೀರು ಸಂಸ್ಕರಿಸುವ ಕಾಮಗಾರಿ ಕೈಗೊಂಡಿರುವುದಿಲ್ಲ.<br>ಹೊಸಪೇಟೆ ನಗರದಲ್ಲಿ 27 ಎಂ.ಎಲ್.ಡಿ ಸಾಮರ್ಥ್ಯದ ಎ.ಎಸ್.ಪಿ ಮಾದರಿಯ ಜಲ ತ್ಯಾಜ್ಯ ಸಂಸ್ಕರಣ ಘಟಕವನ್ನು ನಿರ್ಮಿಸಲಾಗಿದೆ ಹಾಗೂ ನಗರಸಭೆಗೆ ಹಸ್ತಾಂತರಿಸಿದೆ. ಪ್ರಸ್ತುತ ಸುಮಾರು 10 ಎಂ.ಎಲ್.ಡಿ ಜಲ ತ್ಯಾಜ್ಯ ಸಂಸ್ಕರಿಸಿದ ನೀರನ್ನು ನೈಸರ್ಗಿಕ ನಾಲೆಗೆ ಬಿಡಲಾಗುತ್ತಿದೆ. |

| | | |
|---|---|---|
| (ಇ) | ಈ ರೀತಿಯಲ್ಲಿ 2ನೇ ಹಂತದ ನಗರಗಳಲ್ಲಿ ಕೊಳಚೆ ನೀರನ್ನು ಸಂಸ್ಕರಿಸದೇ ಜಲ ಮೂಲಗಳಿಗೆ ಈ ಕೊಳಚೆ ನೀರನ್ನು ಬಿಟ್ಟಲ್ಲಿ ಕುಡಿಯುವ ನೀರಿನ ಮೂಲಗಳು ಹಾನಿಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಬಂದಿದೆ.<br>ಕೊಳಚೆ ನೀರನ್ನು ಸಂಸ್ಕರಿಸದೆ ಜಲಮೂಲಗಳಿಗೆ ಈ ಕೊಳಚೆ ನೀರನ್ನು ಬಿಡುವುದನ್ನು ತಡೆಗಟ್ಟಲು ಸರ್ಕಾರವು ರೂ. 454.715 ಕೋಟಿಗಳಿಗೆ 23 ನಗರ/ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಕೊಳಚೆ ನೀರು ಶುದ್ಧೀಕರಣ ಘಟಕ ನಿರ್ಮಿಸಲು ಆದೇಶ ಸಂಖ್ಯೆ: ನಅಇ 01 ಯುಡಬ್ಲ್ಯೂಎಲ್ 2019 (ಭಾಗ-3), ದಿನಾಂಕ 25-03-2021ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಸದರಿ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.<br><br>**ಕೆ.ಯು.ಐ.ಡಿ.ಎಫ್.ಸಿ.-**<br><br>**ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣಾ ಯೋಜನೆ (ಕೆಎಮ್ಆರ್‌ಪಿ)**<br><br>ಕೆಎಂಆರ್‌ಪಿ ಯೋಜನೆಯಡಿ ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ತಿಪಟೂರು ನಗರಸಭೆಗಳಲ್ಲಿ ತಿಪಟೂರು ನಗರಸಭೆಗಳಲ್ಲಿ WSP (Water Sequential Pond) & SBR (Sequential Batch Reactor type) ತಂತ್ರಜ್ಞಾನಗಳ ಮುಖಾಂತರ ಸಂಸ್ಕರಿಸಿದ ನೀರನ್ನು ಹತ್ತಿರದಲ್ಲಿರುವ ನೈಸರ್ಗಿಕ ನಾಲೆಗೆ ಹರಿಸಲಾಗುತ್ತದೆ. ಅಲ್ಲಿಂದ ಸ್ಥಳೀಯ ರೈತರು ಆ ನೀರನ್ನು ಕೃಷಿ ಚಟುವಟಿಕೆಗಳಿಗೆ ಬಳಸುತ್ತಿದ್ದಾರೆ. ಆದ್ದರಿಂದ ಕುಡಿಯುವ ನೀರಿನ ಮೂಲಗಳು ಕಲುಷಿತವಾಗಿರುವುದಿಲ್ಲ.<br><br>**ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ)**<br><br>ಹೊಪೇಟೆನಗರ ಸಭೆಯಲ್ಲಿ ಎನ್‌ಕೆಯುಎಸ್‌ಐಪಿ ಯೋಜನೆ ಮತ್ತು ಅಮೃತ್ ಯೋಜನೆ ಅಡಿಯಲ್ಲಿ (ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿವತಿಯಿಂದ ಪ್ರಗತಿಯಲ್ಲಿರುವ ನಿರ್ಮಿಸುತ್ತಿರುವ ಕೊಳವೆ ಜಾಲವು ಸೇರಿದಂತೆ) ಎಲ್ಲಾ ಜಲ ತ್ಯಾಜ್ಯವನ್ನು ಸಂಸ್ಕರಣ ಘಟಕಕ್ಕೆ ಪಡೆದು, ಸಂಸ್ಕರಿಸಿದ ನಂತರ ನೈಸರ್ಗಿಕ ನಾಲೆಗೆ ಬಿಡಲಾಗುವುದು.<br><br>**ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕೆ.ಐ.ಯು.ಡಬ್ಲ್ಯೂ.ಎಂ.ಐ.ಪಿ)**<br><br>ಕ್ವಿಮಿಪ್ ಯೋಜನೆಯಲ್ಲಿ ಹರಿಹರ ನಗರದಲ್ಲಿ 18 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಮಾಡಿ, Facultative Aerated Lagoon (FAL) ತಂತ್ರಜ್ಞಾನದ ಮುಖಾಂತರ ನೀರನ್ನು ಶುದ್ಧೀಕರಿಸಿ ನಂತರ ನೀರನ್ನು ಹತ್ತಿರದಲ್ಲಿರುವ ನೈಸರ್ಗಿಕ ನಾಲೆಗೆ ಹರಿಸಲಾಗುತ್ತದೆ. ಅಲ್ಲಿಂದ ಸ್ಥಳೀಯ ರೈತರು ಆ ನೀರನ್ನು ಕೃಷಿ ಚಟುವಟಿಕೆಗಳಿಗೆ ಬಳಸುತ್ತಿದ್ದಾರೆ. ಆದ್ದರಿಂದ ಕುಡಿಯುವ ನೀರಿನ ಮೂಲಗಳು ಕಲುಷಿತವಾಗುವುದಿಲ್ಲ. |

| | | |
|---|---|---|
| | | ಕ.ನ.ನೀ.ಸ ಮತ್ತು ಒ.ಚ ಮಂಡಳಿ.–<br><br>ಕರ್ನಾಟಕದಲ್ಲಿ 17 ಕಲುಷಿತ ನದಿ ವಿಸ್ತರಣೆಗಳನ್ನು ಗುರುತಿಸಲಾಗಿರುತ್ತದೆ. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಮಾನದಂಡದಂತೆ ಮಲಿನವಾಗುತ್ತಿರುವ ನದಿ ಪಾತ್ರಗಳಲ್ಲಿ ಬರುವ ನಗರ/ಪಟ್ಟಣಗಳ ಒಳಚರಂಡಿ ವ್ಯವಸ್ಥೆಯಿಂದ ಉತ್ಪತ್ತಿಯಾಗುವ ಮಲಿನ ನೀರನ್ನು ಪೂರ್ಣ ಪ್ರಮಾಣದಲ್ಲಿ ಶುದ್ಧೀಕರಿಸಲು ಹಾಗೂ ನಾಲಾ ಮತ್ತು ಇತರೆ ಮೂಲಗಳಿಂದ ಹರಿಯುತ್ತಿರುವ ಮಲಿನ ನೀರಿನ ಜಾಗಗಳನ್ನು ಗುರುತಿಸಿ ಅಗತ್ಯ ಪರಿಹಾರ (interception & diversion) ಕಾಮಗಾರಿಗಳನ್ನು ಮಾಡಿ, ಮಲಿನ ನೀರಿನ ಶುದ್ಧೀಕರಣಾಗಾರಗಳನ್ನು ಸೇರುವಂತೆ ರಾಜ್ಯದ 24 ನಗರ/ಪಟ್ಟಣಗಳಿಗೆ ಒಳಚರಂಡಿ ಯೋಜನೆಗಳಿಗೆ ರೂ.619.77 ಕೋಟಿಗಳಿಗೆ ಅನುಮೊದನೆಯಗಿದ್ದು ಸದರಿ ಯೋಜನೆಗಳಡಿಯಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. |
| (ಈ) | ರಾಜ್ಯದಲ್ಲಿರುವ ಎಲ್ಲಾ ನಗರ ಸಭೆಗಳ ವ್ಯಾಪ್ತಿಯಲ್ಲಿನ ಪ್ರದೇಶಗಳ ಕೊಳಚೆ ನೀರನ್ನು ಸಂಸ್ಕರಿಸಲು ಸರ್ಕಾರದ ಚಿಂತನೆಗಳೇನು; ಇದನ್ನು ಯಾವ ಕಾಲಮಿತಿಯಲ್ಲಿ ಮುಗಿಸಲಾಗುವುದು? (ವಿವರ ನೀಡುವುದು) | ಅನುದಾನ ಲಭ್ಯತೆಗನುಗುಣವಾಗಿ ರಾಜ್ಯದಲ್ಲಿರುವ ಎಲ್ಲಾ ನಗರಸಭೆ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಕೊಳಚೆ ನೀರನ್ನು ಸಂಸ್ಕರಿಸಲು ಸ್ವಚ್ಛ ಭಾರತ 2.0 ಯೋಜನೆಯಡಿ ಮತ್ತು ರಾಜ್ಯ ಸರ್ಕಾರದ ಯೋಜನೆಗಳಲ್ಲಿ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ನಅಇ 246 ಜಿಇಎಲ್ 2022(ಇ)

(ಬಿ.ಎ.ಬಸವರಾಜು)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜು)
ನಗರಾಭಿವೃದ್ಧಿ ಸಚಿವರು